	ಅಂತಹ ಸಿಬ್ಬಂದಿಗಳ ವಿರುದ್ಧ ಕೈಗೊಂಡ ಕ್ರಮವೇನು?	ಹಾಗೂ ವಾಸ್ತವ್ಯ ಮಾಡದೇ ಇರುವ ಸಿಬ್ಬಂದಿಗಳ ಮನೆ ಬಾಡಿಗೆ ಭತ್ಯೆಗಳನ್ನು ತಡೆಹಿಡಿಯಲು ಕ್ರಮ ಕೈಗೊಳ್ಳಲಾಗುತ್ತಿದೆ
ಊ)	ಜಮಖಂಡಿ ತಾಲ್ಲೂಕಿನ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಸಿಬ್ಬಂದಿ ಕೊರತೆ ಇದ್ದು ಯಾವಾಗ ನೇಮಕಾತಿ ಮಾಡಲಾಗುವುದು?	ಜಮಖಂಡಿ ತಾಲ್ಲೂಕಿಗೆ ೨೪ ವೈದ್ಯರ ಹುದ್ದೆಗಳು ಮಂಜೂರಾಗಿದ್ದು, ೨೩ ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ ೧ ವೈದ್ಯರ ಹುದ್ದೆ ಖಾಲಿ ಇದೆ ೨೪೯ ವಿವಿಧ ವರ್ಗದ ಹುದ್ದೆಗಳು ಮಂಜೂರಾಗಿದ್ದು, ಇವುಗಳಲ್ಲಿ ೨೦೦ ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ, ೪೯ ಹುದ್ದೆಗಳು ಖಾಲಿ ಇವೆ ಖಾಲಿ ಇರುವ ಹುದ್ದೆಗಳನ್ನು ನೇಮಕಾತಿ ಪ್ರಕ್ರಿಯೆ ನಡೆಯುವ ಸಂದರ್ಭದಲ್ಲಿ ತುಂಬಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೭೦೨ (೧೯೧೦)

ಸದಸ್ಯರ ಹೆಸರು ಶ್ರೀ ಸೋಮಣ್ಣ ವಿ (ಬಿನ್ನಪೇಟೆ)

ಉತ್ತರಿಸುವ ಸಚಿವರು ಶ್ರೀ ವಿ ಎಸ್ ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು ಸಚಿವರು)

ಕ್ರ ಸಂ	ಪ್ರಶ್ನೆ	ಉತ್ತರ
ಅ)	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾಲೇಜುಗಳ ವಿದ್ಯಾರ್ಥಿಗಳು ಹಾಗು ಶಿಕ್ಷಕರುಗಳಿಗೆ	ರೂ ೧,೨೨,೨೧,೭೦೧/-

	ಸ್ಮಾರ್ಟ್‌ಕಾರ್ಡ್ ನೀಡಲು ವೆಚ್ಚ ಮಾಡಿದ ಹಣವೆಷ್ಟು?	
ಆ)	ಈ ಯೋಜನೆ ವಿಫಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಈ ಯೋಜನೆ ವಿಫಲಗೊಂಡಿರುವುದಿಲ್ಲ ಪ್ರಸ್ತುತ ಈ ಯೋಜನೆ ಪ್ರಗತಿಯ ಹಂತದಲ್ಲಿದೆ
ಇ)	ಈ ಯೋಜನೆ ವಿಫಲಗೊಳ್ಳಲು ಕಾರಣಗಳೇನು ?	ಉದ್ಭವಿಸುವುದಿಲ್ಲ
ಈ)	ಹಾಗಿದ್ದಲ್ಲಿ, ಈ ಹಗರಣದ ಬಗ್ಗೆ ತನಿಖೆ ನಡೆಸಲು ಸರ್ಕಾರ ಕೈಗೊಂಡ ಕ್ರಮಗಳೇನು?	ಉದ್ಭವಿಸುವುದಿಲ್ಲ

ಸಂಖ್ಯೆ ಆಕುಕ ೧೫೭೭ ಎಂಪಿಎಸ್ ೨೦೦೭

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೭೦೪ (೧೯೧೨)

ಸದಸ್ಯರ ಹೆಸರು ಶ್ರೀ ಸೋಮಣ್ಣ ವಿ

ಉತ್ತರಿಸುವ ಸಚಿವರು ಶ್ರೀ ಡಾ ವಿ ಹೆಚ್ ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಈಗಾಗಲೇ ಹೊಸದಾಗಿ ಪ್ರಾರಂಭಿಸಿರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಹಾಗೂ ೨೦೦೭-೦೮ ರಲ್ಲಿ ಪ್ರಾರಂಭಿಸಲಿರುವ ಕಾಲೇಜುಗಳಲ್ಲಿ ಬೋಧಕ ಸಿಬ್ಬಂದಿಯನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು?	ರಾಜ್ಯದಲ್ಲಿ ಈಗಾಗಲೇ ಹೊಸದಾಗಿ ಪ್ರಾರಂಭಿಸಿರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಮತ್ತು ೨೦೦೭-೦೮ರಲ್ಲಿ ಪ್ರಾರಂಭಿಸಿರುವ ಕಾಲೇಜುಗಳಲ್ಲಿ ಬೋಧಕ ಸಿಬ್ಬಂದಿಗಳನ್ನು ಭರ್ತಿ ಮಾಡಲು ಸರ್ಕಾರ ಮೆರಿಟ್ ಮತ್ತು ಮೀಸಲಾತಿ ನಿಯಮಗಳನ್ನು ಆಧಾರವಾಗಿಟ್ಟುಕೊಂಡು ವಾಕ್ – ಇನ್-ಇಂಟರ್ ವ್ಯೂ ಮೂಲಕ ನೇಮಕಾತಿ ಮಾಡಲಾಗಿದೆ ಮತ್ತು ಮಾಡಿಕೊಳ್ಳಲಾಗುತ್ತಿದೆ